**ಪಿಡಬ್ಲೂ-1** ಓ.ಎಸ್.ನಂ.401/2012

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.29.07.2023**

**ಪಾಟಿ ಸವಾಲು : 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎ.ಹೆಚ್.ವಿ ವಕೀಲರಿಂದ:**

1. ಈ ದಾವೆಯನ್ನು ಸಲಿಲಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಈ ದಾವೆಯನ್ನು ಪ್ರತಿವಾದಿ ಗಳ ವಿರುದ್ದ ಸಲ್ಲಿಸಿರುತ್ತೇನೆ. ದಾವಾ ಆಸ್ತಿಯನ್ನು ನಾನು 1 ನೇ ಪ್ರತಿವಾದಿ ಸಂಘದಿಂದ ಖರೀದಿ ಮಾಡಿರುತ್ತೇನೆ. ದಾವಾ ಸ್ವತ್ತನ್ನು ಖರೀದಿಸುವ ಸಂದರ್ಬದಲ್ಲಿ ದಾವಾ ಆಸ್ತಿಗೆ 1 ನೇ ಪ್ರತಿವಾದಿ ಮಾಲಿಕರು ಆಗಿದ್ದರು. ಈ ಬಗ್ಗೆ ನಿಪಿ-1 ನೊಂದಾಯಿತ ಕ್ರಯ ಪತ್ರವನ್ನು ಹಾಜರು ಪಡಿಸಿರುತ್ತೇನೆ. 1 ನೇ ಪ್ರತಿವಾದಿ ದಾವಾ ಆಸ್ತಿಗೆ ಮಾಲಿಕರು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ಖರೀದಿಸುವ ಮೊದಲು ಜಿ.ಪಿ.ಎ, ಎಂ.ಓ.ಯು, ಕ್ರಯ ಪತ್ರ ಹಾಗೂ ಲೇಔಟ್ ಪ್ಲಾನ್, ಭೂ ಪರಿವರ್ತನೆ ಆದೇಶವನ್ನು ನೋಡಿ ಖರೀದಿಸಿರುತ್ತೇನೆ. ಆ ರೀತಿ ನಾನು ನೋಡಿದ ಎಂ.ಓ.ಯು ಗಳು ಸರ್ವೆ ನಂ.176 ಕ್ಕೆ ಸಂಬಂದಿಸಿರುತ್ತದೆ. ಅದರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. 2 ನೇ ಪ್ರತಿವಾದಿ ರವರು 1 ನೇ ಪ್ರತಿವಾದಿ ಸಂಘದಲ್ಲಿ ಏಂಜೆಂಟ್ ಆಗಿದ್ದರು. ಈ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ 1 ನೇ ಪ್ರತಿವಾದಿ ಕೊಟ್ಟರೆ ಹಾಜರು ಪಡಿಸುತ್ತೇನೆ. 1 ನೇ ಪ್ರತಿವಾದಿ ಸಂಘ ಪ್ರಸ್ತುತ ಈಗ ಅಸ್ಥಿತ್ವದಲ್ಲಿ ಇರುತ್ತದೆ. ಈ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಕೇಳಿ ಪಡೆದುಕೊಂಡು ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ.

2. ದಾವಾ ಆಸ್ತಿಯನ್ನು ಖರೀದಿಸುವ ಸಂದರ್ಬದಲ್ಲಿ 1 ನೇ ಪ್ರತಿವಾದಿ ಸಂಘಕ್ಕೆ ಆರ್.ಸಂಪತ್ ಅಧ್ಯಕ್ಷರಾಗಿದ್ದರು. ಈ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಪ್ರಸ್ತುತ 1 ನೇ ಪ್ರತಿವಾದಿ ಸಂಘಕ್ಕೆ ಯಾರು ಅಧ್ಯಕ್ಷರು ಆಗಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯನ್ನು ಖರೀದಿ ಮಾಡುವ ಸಂದರ್ಬದಲ್ಲಿ ಹಣ ಕಾಸಿನ ವ್ಯವಹಾರವನುನ 1 ನೇ ಪ್ರತಿವಾದಿ ಜೊತೆ ಮಾಡಿದ್ದೇನೆ ಎಂದರೆ ಸರಿ. ಆ ಕಾರಣದಿಂದ ದಾವಾ ಆಸ್ತಿಯಲ್ಲಿ ಯಾವುದೇ ಸಮಸ್ಯೆ ಆದರೆ 1 ನೇ ಪ್ರತಿವಾದಿ ರವರು ಜವಾಬ್ದಾರರಾಗಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಸಂಘವು ಅಸ್ಥಿತ್ವದಲ್ಲಿ ಇಲ್ಲದೇ ಇರುವ ಕಾರಣ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

3. ನಾನು ನೋಡಿದ ಲೇಔಟ್ ಪ್ಲಾನ್ 80 ಎಕರೆಗೆ ಸಂಬಂದಿಸಿರುತ್ತದೆ. ಸದರಿ

ಲೇಔಟ್ ಪ್ಲಾನ್ ನ್ನು 13 ಎಕರೆಯನ್ನು ಬಯ್ಯಪ್ಪ ಮತ್ತು ಉಳಿದ ಆಸ್ತಿಯನ್ನು ಬಾಗಲೂರು ಗ್ರಾಮ ಪಂಚಾಯಿತಿ ಅನುಮೋದನೆ ಮಾಡಿದ್ದರು. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ಸಂಘದವರು ತಯಾರಿಸಿದ ಲೇಔಟ್ ಪ್ಲಾನ್ ನ್ನು ನಮಗೆ ತೋರಿಸಿ ದಾವಾ ಆಸ್ತಿಯನ್ನು ನಮಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಹೇಳುವಂತಹ ಯಾವುದೇ ಲೇಔಟ್ ಪ್ಲಾನ್ ಅನುಮೋದನೆಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಸರ್ವೆ ನಂ.176 ರಲ್ಲಿ ಬರುತ್ತದೆ. ನಿಪಿ-1 ನ್ನು ಜೊಸೇಫ್ ಪೆಂಡೆಂಟ್, ಆರ್.ಸಂಪತ್ ಮತ್ತು ಆರ್.ಸೆಲ್ವನ್ ಎಂಬುವವರು ಬರೆದುಕೊಟ್ಟಿರುತ್ತಾರೆ. ನಿಪಿ-1 ನ್ನು 2 ನೇ ಪ್ರತಿವಾದಿ ನನಗೆ ಬರೆದುಕೊಟ್ಟಿ ರುವುದಿಲ್ಲ ಎಂದರೆ ಸರಿ.

4. ನಿಪಿ-1 ರಲ್ಲಿ ನಮೂದು ಇರುವ ಸರ್ವೆ ನಂಬರ್ ಗಳ ಮಾಲಿಕರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯು ನಿಖರವಾಗಿ ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಸರ್ವೆ ನಂ.176 ರಲ್ಲಿ ಬರುತ್ತದೆ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನಿಪಿ-1 ರಲ್ಲಿರುವ ದಾಖಲಾತಿಯ ಸಂಖ್ಯೆಗಳು ನೊಂದಾಯಿತ ಕ್ರಯ ಪತ್ರದ ಸಂಖ್ಯೆ ಆಗಿರುತ್ತದೆ. ಸದರಿ ದಾಖಲಾತಿಯ ಸಂಖ್ಯೆ ಸ್ವಾದೀನ ರಹಿತ ಕರಾರು ಪತ್ರದ ಸಂಖ್ಯೆ ಎಂದರೆ ಸರಿಯಲ್ಲ. ಆ ರೀತಿ ಸ್ವಾದೀನ ರಹಿತ ಕರಾರು ಪತ್ರ ಎಂದು 1 ನೇ ಪ್ರತಿವಾದಿಗೆ ಗೊತ್ತಿದ್ದರೂ ನಮಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯ ಸಂಖ್ಯೆ.371 ಆಗಿರುತ್ತದೆ. ಸದರಿ ಸಂಖ್ಯೆ ನ್ನು 1 ನೇ ಪ್ರತಿವಾದಿ ಸೃಷ್ಟಿಮಾಡಿರುವ ಲೇಔಟ್ ಪ್ಲಾನ್ ಆಧಾರದ ಮೇಲೆ ನಮಗೆ ಕೊಟ್ಟಿದ್ದಾರೆ ಎಂದರೆ ಸರಿ.

5. ನಿಪಿ-2 ರಲ್ಲಿ ಹಿಂದಿನ ಮಾಲಿಕರು ಹೆಸರು ಇರುವುದಿಲ್ಲ ಎಂದರೆ ಸರಿ. ಆ ಕಾರಣದಿಂದ ನಿಪಿ-2 ದಾಖಲೆಯನ್ನು 1 ನೇ ಪ್ರತಿವಾದಿ ಸಂಘದವರು ಮಾಡಿಸಿಕೊಟ್ಟಿದ್ದಾರೆ ಎಂದರೆ ಸರಿ. ನಿಪಿ-7 ರಿಂದ 16 ಛಾಯಚಿತ್ರಗಳನ್ನು 2011 ರಲ್ಲಿ ನಾನೇ ತೆಗೆದಿರುತ್ತೇನೆ. ಸದರಿ ಪೋಟೋಗಳಲ್ಲಿ ದಾವಾ ಆಸ್ತಿಯು ಕಂಡು ಬರುವುದಿಲ್ಲ ಎಂದರೆ ಸರಿ. ದಾವೆ ದಾಖಲಿಸುವ ಸಂದರ್ಬದಲ್ಲಿ ದಾವಾ ಆಸ್ತಿಯ ಮುಂದೆ ನಿಂತು ಪೋಟೋ ತೆಗೆಯಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಈಗಿನ ಪೊಟೋಗಳನ್ನು ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ 2 ನೇ ಪ್ರತಿವಾದಿ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

6. ವಾದ ಪತ್ರದಲ್ಲಿ ತಿಳಿಸಿರುವ ಗಲಾಟೆಯ ಸಂದರ್ಬದಲ್ಲಿ ನಾನೂ ಸಹ ಹಾಜರಿದ್ದೆ. ಆ ಸಂದರ್ಬದಲ್ಲಿ ಇತರ ನಿವೇಶನ ಮಾಲಿಕರು ಇದ್ದರು. ಆ ಸಂದರ್ಬದಲ್ಲಿ 2, 3 ನೇ ಪ್ರತಿವಾದಿ, ಆರ್ ಸಂಪತ್ ಮತ್ತು 15-20 ಜನ ಗೂಂಡಾಗಳು ಜೆಸಿಬಿ ಜೊತೆ ಇದ್ದರು. ಈ ಬಗ್ಗೆ ದೂರು ನೀಡಲು ಹೋದಾಗ ಪೋಲಿಸರು ನ್ಯಾಯಾಲಯಕ್ಕೆ ಹೋಗುವಂತೆ ಹೇಳಿರುತ್ತಾರೆ. ವಾದ ಪತ್ರದಲ್ಲಿ ತಿಳಿಸಿರುವ ಯಾವುದೇ ಗಲಾಟೆ ಆಗದಿದ್ದರೂ 1 ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿ ಸೇರಿ ದಾಖಲಾತಿಗಳನ್ನು ಸೃಷ್ಟಿಸಿ ನ್ಯಾಯಲಯಕ್ಕೆ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 2 ನೇ ಪ್ರತಿವಾದಿ ಸ್ವಾದೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿ ಸೇರಿ 2 ನೇ ಪ್ರತಿವಾದಿಗೆ ತೊಂದರೆ ಕೊಡಬೇಕೆಂದು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**